ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 80-86
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದೇವದುರ್ಗ ತಾಲೂಕಿನ ಶಾಸನೋಕ್ತ ದೇವಾಲಯಗಳು

**ಡಾ. ಶಶಿಕಾಂತ್**
ಸಹ ಪ್ರಾಧ್ಯಾಪಕರು, ಸರ್ಕಾರು ಪ್ರಥಮ ದರ್ಜೆ ಕಾಲೇಜು, ಕುರುಗೋಡು

***Abstract:***

*'ದೇವದುರ್ಗ ತಾಲೂಕಿನ ಶಾಸನೋಕ್ತ ದೇವಾಲಯಗಳು' ಎಂಬ ಸಂಶೋಧನಾ ಲೇಖನವು ದೇವದುರ್ಗ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ದೇವಾಲಯಗಳ ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸುತ್ತದೆ. ಶಾಸನಗಳಲ್ಲಿ ದೊರೆಯುವ ದೇವಾಲಯಗಳ ಹೆಸರುಗಳು, ನಿರ್ಮಾಣಕಾಲ, ದಾನ–ಧರ್ಮಗಳು, ಪೂಜಾ ವ್ಯವಸ್ಥೆ ಮತ್ತು ದೇವಾಲಯಗಳಿಗೆ ಸಂಬಂಧಿಸಿದ ಭೂದಾನಗಳ ವಿವರಗಳನ್ನು ಈ ಲೇಖನದಲ್ಲಿ ನೀಡಲಾಗಿದೆ. ದೇವಾಲಯಗಳ ನಿರ್ಮಾಣದಲ್ಲಿ ವಿವಿಧ ರಾಜವಂಶಗಳು, ಸ್ಥಳೀಯ ಅರಸರು, ಅಧಿಕಾರಿಗಳು ಮತ್ತು ದಾನಿಗಳ ಪಾತ್ರವನ್ನು ಶಾಸನಾಧಾರಗಳ ಮೂಲಕ ಗುರುತಿಸಲಾಗಿದೆ. ದೇವಾಲಯಗಳು ಧಾರ್ಮಿಕ ಕೇಂದ್ರಗಳಷ್ಟೇ ಅಲ್ಲದೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸಿದ್ದ ರೀತಿಯನ್ನು ಅಧ್ಯಯನ ಮಾಡಲಾಗಿದೆ. ಶಾಸನೋಕ್ತ ದೇವಾಲಯಗಳ ಸಂರಕ್ಷಣೆ, ದಾಖಲೀಕರಣ ಮತ್ತು ಅವುಗಳ ಐತಿಹಾಸಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವನ್ನು ಲೇಖನವು ಪ್ರತಿಪಾದಿಸುತ್ತದೆ.*

***Keywords:*** *ದೇವದುರ್ಗ ತಾಲೂಕು, ಶಾಸನೋಕ್ತ ದೇವಾಲಯಗಳು, ದೇವಾಲಯಗಳ ಇತಿಹಾಸ, ಶಾಸನಗಳು, ಧಾರ್ಮಿಕ ಪರಂಪರೆ.*

## ಪೀಠಿಕೆ

ರಾಯಚೂರು ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ದೇವದುರ್ಗ ತಾಲೂಕು ಪ್ರಮುಖವಾಗಿದೆ. ಇದನ್ನು ಪ್ರಾಚೀನ ಕಾಲದಲ್ಲಿ 'ದೇವದಾರುಗ' ಎಂದು ಕರೆಯುತ್ತಿದ್ದರು. ಇದು ಸಮುದ್ರ ಮಟ್ಟದಿಂದ 398 ಮೀ(1306ಅಡಿ) ಎತ್ತರದಲ್ಲಿದ್ದು, 2960ಚ.ಕಿ.ಮೀ ವಿಸ್ತಾರವಾಗಿದೆ. ಇಲ್ಲಿನ ಜನಸಂಖ್ಯೆಯು 2011ರ ಜನಗಣತಿಯ ಪ್ರಕಾರ 2,80,606 ರಷ್ಟಿದ್ದು, 1,40,165 ಪುರುಷರು, 1,40,441 ಮಹಿಳೆಯರು ಇದ್ದಾರೆ. ಇಲ್ಲಿನ ಸಾಕ್ಷರತೆ ಶೇ.36ರಷ್ಟು ಮಾತ್ರ ಇದೆ. ದೇವದುರ್ಗ ತಾಲೂಕನ್ನು ಅನೇಕ ರಾಜಮಹಾರಾಜರು ಆಳ್ವಿಕೆಗೆ ಒಳಪಟ್ಟ ಬಗ್ಗೆ ಈ ತಾಲೂಕಿನಲ್ಲಿ ಕೋಟೆ, ದೇವಾಲಯಗಳು, ಶಾಸನಗಳಿಂದ ತಿಳಿದುಬರುತ್ತದೆ.

ದೇವದುರ್ಗ ತಾಲೂಕಿನಲ್ಲಿ ಐತಿಹಾಸಿಕ ಮಹತ್ವವನ್ನು ಪಡೆದಿರುವ ಏಕೈಕ ಗ್ರಾಮ ಗಬ್ಬೂರು ಆಗಿದೆ. ಕಲ್ಯಾಣಿ ಚಾಲುಕ್ಯರ ಕಾಲದ 12ಕ್ಕೂ ಹೆಚ್ಚು ದೇವಸ್ಥಾನಗಳು ಇರುವುದು ಇಲ್ಲಿನ ವಿಶೇಷವಾಗಿದೆ. ಆದ್ದರಿಂದ ಈ ಗ್ರಾಮವನ್ನು 'ದೇವಾಲಯಗಳ ಗ್ರಾಮ' ಎಂದು ಕರೆಯುತ್ತಾರೆ. ಹಾಗಾಗಿ ಇದೊಂದು ಐತಿಹಾಸಿಕ ಪ್ರವಾಸಿ ತಾಣವಾಗಿ ಗುರುತಿಸಲಾಗಿದೆ.

***Please cite this article as:*** ಶಶಿಕಾಂತ್. (2026). ದೇವದುರ್ಗ ತಾಲೂಕಿನ ಶಾಸನೋಕ್ತ ದೇವಾಲಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 80–86

**ಕೇಶವ ದೇವಾಲಯ, ಗಬ್ಬೂರು**

ಗಬ್ಬೂರು ಗ್ರಾಮವು ದೇವದುರ್ಗ ತಾಲೂಕು ಕೇಂದ್ರದಿಂದ 29 ಕಿ.ಮೀ. ರಾಯಚೂರು ಜಿಲ್ಲಾ ಕೇಂದ್ರದಿಂದ 35 ಕಿ.ಮೀ. ದೂರದಲ್ಲಿದೆ. ಈ ತಾಲೂಕಿನ ಗಬ್ಬೂರು ಗ್ರಾಮವು ಐತಿಹಾಸಿಕ ದೇವಾಲಯಗಳಿಂದ ಕೂಡಿದೆ. ಆದ್ದರಿಂದ ಈ ಗ್ರಾಮವನ್ನು ದೇವಾಲಯಗಳ ಪಟ್ಟಣವೆಂದು ಕರೆಯಲಾಗುತ್ತದೆ. ಸರಳ ರಚನೆಯಿಂದ ಕೂಡಿದ ಈ ದೇವಾಲಯಕ್ಕೆ ಎರಡು ಗರ್ಭಗೃಹಗಳಿದ್ದು ಪ್ರತಿ ಗರ್ಭಗೃಹಕ್ಕೂ ಒಂದೊಂದು ಅಂತರಾಳಗಳಿವೆ. ಉತ್ತರ ಮತ್ತು ಪೂರ್ವ ದೆಸೆಗಳಿಂದ ಪ್ರವೇಶಿಸಬಹುದಾದ ಎರಡು ಸಭಾಮಂಟಪಗಳಿವೆ. ಪೂರ್ವ ದಿಸೆಯಲ್ಲಿ ನಂದಿ ಮಂಟಪವಿದೆ, ಇದರ ನಂತರ ಪೂರ್ವಕ್ಕೆ ಮತ್ತೊಂದು ಅಂಕಣವಿದೆ.

ಗಬ್ಬೂರಿನಲ್ಲಿರುವ ಮತ್ತೊಂದು ಪ್ರಮುಖ ದೇವಾಲಯವೆಂದರೆ ಕೇಶವ ದೇವಾಲಯವಾಗಿದೆ. ಕ್ರಿ.ಶ.12 ಶತಮಾನದಲ್ಲಿ ನಿರ್ಮಿಸಲ್ಪಟ್ಟ ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದೆ. ಈ ದೇವಾಲಯ ಕುರಿತು ಮಾಹಿತಿ ನೀಡುವ 3 ಶಾಸನಗಳು ದೊರೆತಿವೆ. ಆದರೆ ಬೇರೆ ಬೇರೆ ದೇವಾಲಯಗಳಲ್ಲಿರುವ ಶಾಸನಗಳು ಈ ದೇವಾಲಯದ ವಿವರಗಳನ್ನು ನೀಡುತ್ತವೆ. ಗರ್ಭಗೃಹ, ಅಂತರಾಳ, ನವರಂಗ, ಎತ್ತರದ ಅಧಿಷ್ಠಾನವನ್ನು ಹೊಂದಿರುವ ಕೇಶವನ ದೇವಾಲಯವು ಊರ ಅಗಸೆಯ ಪಕ್ಕದಲ್ಲಿದೆ. ಪೂರ್ವಾಭಿಮುಖದ ಅಗಸೆಯಲ್ಲಿ ನಿಂತರೆ ಬಲದಲ್ಲಿ ಕೇಶವ ದೇವಾಲಯವು ಬಂದರೆ, ಅಗಸೆಯ ಎಡದಲ್ಲಿ ಆನೆಯ ನೀಲಕಂಠೇಶ್ವರನ ದೇವಾಲಯವು ಇದೆ. ತೆರೆದ ಮುಖಮಂಟಪವಿದ್ದು, ಪಶ್ಚಿಮ ಮತ್ತು ಉತ್ತರ ದಿಸೆಗಳಲ್ಲಿ ದ್ವಾರಬಾಗಿಲುಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಶಿಲಾ ಪೀಠದ ಮೇಲೆ ಕೇಶವನ ಉಬ್ಬು ಶಿಲ್ಪವಿದೆ. ನಾಲ್ಕು ಕರಗಳಿವೆ.

ಗಬ್ಬೂರು ಅಗಸೆಯ ಹತ್ತಿರದ ಬಂಗಾರ ಬಸವಣ್ಣನ ಗುಡಿಯ ಬಲಭಾಗದಲ್ಲಿಯೇ ಈ ತೃಟಿತ ಶಾಸನವಿದೆ. ಕ್ರಿ.ಶ.1124ಕ್ಕೆ ಸೇರಿದ್ದು, ಈ ಶಾಸನದ ವಿವರದಲ್ಲಿ ಗಬ್ಬೂರು ಪಟ್ಟಣದ ಕೇಶವ ದೇವರಿಗೆ ಬೇತಾಳಿಯ ಸೋಮೇಶ್ವರ ಭಟ್ಟರಮಗ ಮಲ್ಲದೇವ ಭಟ್ಟನು ದಾನ ನೀಡಿರುವ ಉಲ್ಲೇಖದ ವಿವರವಿದೆ.[1] ಈ ದೇವಾಲಯದ ಹತ್ತಿರವಿರುವ ಭೋಗೇಶ್ವರನ ದೇವಾಲಯದ ಬೃಹತ್ ಶಿಲಾ ಫಲಕದಲ್ಲಿ ಕೂಡ ಈ ಕೇಶವ ದೇವಾಲಯದ ವಿವರವು ದೊರೆಯುವುದು. ಹರದೇವನ ಮಗನಾದ ಮಾಧವ ಸೋಮಯಾಜಿಯು ಈ ದೇವಾಲಯ ಕಟ್ಟಿದ ವಿವರವಿರುವುದಲ್ಲದೇ ಕ್ರಿ.ಶ.1126ರ ಅವಧಿಯಲ್ಲಿ ಚಾಲುಕ್ಯ ತ್ರಿಭುವನಮಲ್ಲದೇವನು ಜಯಂತಿಪುರದ ನೆಲೆಯಲ್ಲಿದ್ದಾಗ ಸೂರ್ಯಗ್ರಹಣದ ನಿಮಿತ್ಯ ವಾಜಪೇಯ ಯಾಜಿಯಾದ ಆದಿತ್ಯಭಟ್ಟ, ಸೋಮಯಾಜಿಯು ಕೇಶವದೇವರಿಗೆ ನೀಡಿದ ಭೂದಾನದ ವಿವರವಿದೆ.[2]

ಗೋಪುರದೂರಿನ ಶ್ರೀ ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನವು ಕೇಶವ ದೇವರ ಕುರಿತು ವಿವರವನ್ನು ತಿಳಿಸುತ್ತದೆ. ಇದು ಕ್ರಿ.ಶ.1149ಕ್ಕೆ ಸೇರಿದ್ದು, ಚಾಲುಕ್ಯ ದೊರೆ ಜಗದೇಕಮಲ್ಲನ ಆಳ್ವಿಕೆಗೆ ಒಳಪಡುತ್ತದೆ. ಈ ಶಾಸನವನ್ನು ದೇವಾಲಯವು ಸ್ಥಾಪನೆಯಾಗಿ 25 ವರ್ಷಗಳ ಬಳಿಕ ಬರೆಯಿಸಲಾಗಿದೆ. ಇದು ಈ ಕೇಶವದೇವರ ದೇವಾಲಯದ ಜೀರ್ಣೋದ್ಧಾರದ ಶಾಸನವಾಗಿದೆ. ಶಾಸನದ ಆರಂಭವು ಸಂಸ್ಕೃತದಲ್ಲಿದೆ. ಗಬ್ಬೂರು ಅವಶೇಷ ಮಹಾಜನಗಳಲ್ಲಿ ಒಬ್ಬನಾದ ವೈಷ್ಣವ ಚಾಕಣ ಭಟ್ಟಯ್ಯ ಎಂಬುವವನು ಗೋಪುರದೂರಿನಲ್ಲಿ ತಾನು ಮಾಡಿಸಿದ ಕೇಶವ ದೇವರ ಪೂಜೆ, ಪುನಸ್ಕಾರ, ಚೈತ್ರ, ನೈವೇದ್ಯ, ನಂದಾದೀಪ ಮುಂತಾದವುಗಳ ನಿರ್ವಹಣೆಗೆ ತಿಪ್ಪಣ್ಣಭಟ್ಟ ಮತ್ತು ಅವನ ಹೆಂಡತಿ ಮಲ್ಲಿಯಕ್ಕನ ಮಗನಾದ ಮಲ್ಲಿದೇವನ ಕೈಯಿಂದ ನಿವೇಶನ, ತೋಟ, ಕರಿಯ ಹೊಲ ಮೂರು ಮತ್ತರು ಭೂಮಿಯನ್ನು ಖರೀದಿಸಿ ದೇವರಿಗೆ ನೀಡಿದ ವಿವರವಿದೆ.[3] ಈ ದೇವಾಲಯದ ಗರ್ಭಗೃಹದ

ಬಾಗಿಲು ರಚನೆ ಸರಳ ರೀತಿಯದಾಗಿದೆ. ಶಿಲಾ ಫಲಕಕ್ಕೆ ಜೋಡಣೆ ಇದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಮೇಲುಭಾಗದಲ್ಲಿ ಐದು ಗೋಪುರಾಕೃತಿಗಳಿವೆ. ಬಾಗಿಲಿನ ಇಕ್ಕೆಲಗಳಲ್ಲಿ ಲತಾ ಪಟ್ಟಿಕೆಯು ಸರಳರೂಪದಲ್ಲಿದೆ. ಅದರ ಅಡಿಯಲ್ಲಿ ಪೂರ್ಣ ಕುಂಬದ ಉಬ್ಬು ಶಿಲ್ಪವಿದೆ. ಈ ದೇವಾಲಯಕ್ಕೆ ಬಲಯುತ ಕಂಭಗಳ ನವರಂಗವಿದೆ. ಚೌಕಾಕೃತಿಯ ಈ ನವರಂಗದ ನಾಲ್ಕು ಮೂಲೆಗಳ ಮೇಲೆ ನಾಲ್ಕು ಕಂಬಗಳಿವೆ ಎದುರಿನ ಅಂತರಾಳದಲ್ಲಿ ಎರಡು ಸ್ವತಂತ್ರ ತೆಳು ಗಾತ್ರದ ಕಂಬಗಳಿದ್ದು, ನವರಂಗದ ರಚನೆಗೆ ಅನುಸರಿಸಿ 16 ಗೋಡೆಯ ಕಂಬಗಳಿವೆ.

**ಭೋಗೇಶ್ವರ ದೇವಾಲಯ, ಗಬ್ಬೂರು**

ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದು, ಕ್ರಿ.ಶ.12ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯವು ಉತ್ತರಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಈ ದೇವಾಲಯದ ಅಧಿಷ್ಠಾನ ಎತ್ತರದಲ್ಲಿದೆ, ಆದರೆ ಮಹಾದ್ವಾರ ಮಾತ್ರ ಪ್ರತ್ಯೇಕವಾಗಿದೆ. ದೇವಾಲಯದ ಮೂರು ಭಾಗ ಭಿತ್ತಿಯಾವರಿಸಿಕೊಂಡಿದೆ. ಉತ್ತರದ ದಿಶೆಯಲ್ಲಿ ಮಾತ್ರ ಕಕ್ಷಾಸನವಿದ್ದು ಅದರಲ್ಲೇ ದೇವಾಲಯದ ಕಂಬಗಳಿವೆ.

ಉತ್ತರದ ಗೋಡೆಯಲ್ಲಿ ಬೃಹತ್ ಶಿಲಾ ಫಲಕವನ್ನು ನಿಲ್ಲಿಸಲಾಗಿದೆ. ಈ ಶಿಲೆಯ ಮೇಲ್ಭಾಗದಲ್ಲಿ ಹರಿಹರ, ವಿನಾಯಕ, ವಿಷ್ಣು ದೇವತೆಗಳ ರೇಖಾ ಚಿತ್ರಗಳಿವೆ. ಅದರ ಅಡಿಯಲ್ಲಿ ಕ್ರಿ.ಶ.1126ರ ಕಾಲಕ್ಕೆ ಸೇರಿದ ಶಾಸನವಿದೆ. ಈ ಶಾಸನವು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ಶಾಸನದ ಪ್ರಾರಂಭದಲ್ಲಿ ಸಂಸ್ಕೃತ ಭಾಷೆಯಲ್ಲಿ ದೇವತೆಗಳನ್ನು ಸ್ತುತಿಸಲಾಗಿದೆ. ಈ ಶಾಸನವು ಈ ದೇವಾಲಯದ ವಿವರಕ್ಕಿಂತ ಹತ್ತಿರದ ಕೇಶವ ದೇವರ ದೇವಾಲಯದ ವಿವರ ಹೇಳುವುದು. ಗೋಪುರಗ್ರಾಮ ಎಂದೇ ಆಗ ಪ್ರಸಿದ್ಧ ಅಗ್ರಹಾರವಾಗಿತ್ತು. ಈ ಶಾಸನ ಕಾಲಕ್ಕೆ ಅಂದರೆ 884 ವರ್ಷಗಳ ಹಿಂದೆ ಯಾಜ್ಞಿಕ ಅಗ್ನಿಹೋತ್ರಿಗಳ ನೆಲೆಯಾಗಿತ್ತು. ಅಂತಹ ಸಾಧಕರಿಗೆ, ವಿದ್ವಾಂಸರಿಗೆ ಅನೇಕರು ಹೊಲ, ತೋಟ, ಗದ್ದೆಗಳನ್ನು ನೀಡುತ್ತಿದ್ದರು ಎಂಬುದನ್ನು ಈ ಶಾಸನವು ವಿವರಿಸುವುದು.[4]

**ಬಂಗಾರ ಬಸವೇಶ್ವರ ದೇವಾಲಯ, ಗಬ್ಬೂರು**

ಗಬ್ಬೂರು ಊರ ಮಧ್ಯದಲ್ಲಿರುವ ಅಗಸೆಯ ಪಕ್ಕದಲ್ಲಿಯೇ ನೀಲಕಂಠೇಶ್ವರ ದೇವಾಲಯ ಇದೆ. ಈ ದೇವಾಲಯ ಹತ್ತಿರ ಶಿಲಾಶಾಸನದ ಫಲಕವಿದೆ. ಇದು ಕ್ರಿ.ಶ.1144ಕ್ಕೆ ಸೇರಿದ್ದು, ಚಾಲುಕ್ಯ ಜಗದೇಕಮಲ್ಲನ ಕಾಲದ್ದಾಗಿದೆ. ಗಬ್ಬೂರಿನ ಉತ್ತರಕ್ಕೆ ಇರುವ ಕನಕಗಿರಿಯ ನಾಗಭೂಷಣದೇವರ ಪೂಜೆ, ಜೀರ್ಣೋದ್ಧಾರಗಳಂತಹ ಕಾರ್ಯಕ್ಕಾಗಿ ದಾನ ಬಿಟ್ಟದ್ದನ್ನು ಉಲ್ಲೇಖಿಸುತ್ತದೆ.[5]

**ಹರಿಹರ ದೇವಾಲಯ, ಗಬ್ಬೂರು**

ಗಬ್ಬೂರು ಗ್ರಾಮದಲ್ಲಿರುವ ಮತ್ತೊಂದು ಪ್ರಮುಖ ಐತಿಹಾಸಿಕ ತಾಣವೆಂದರೆ ಹರಿಹರ ದೇವಾಲಯ. ಈ ದೇವಾಲಯದಲ್ಲಿ ಕ್ರಿ.ಶ.1171ರ ಕಾಲಘಟ್ಟದಲ್ಲಿ ಕಳಚೂರಿ ರಾಯಮುರಾರಿ ಸೋವಿದೇವನು ಈ ದೇವಾಲಯ ಕಟ್ಟಿಸಿರುವನು ಎಂದು ಶಾಸನವು ಹೇಳುತ್ತದೆ. ಇದು ಈ ದೇವಾಲಯದ ಸಭಾಮಂಟಪದ ಮಧ್ಯದಲ್ಲಿದೆ.[6] ಈ ದೇವಾಲಯಕ್ಕೆ ಮೂರು ಗರ್ಭಗೃಹಗಳಿದ್ದು, ಪ್ರತಿಯೊಂದಕ್ಕೂ ಒಂದೊಂದು ಅಂತರಾಳಗಳಿವೆ. ಈ ಅಂತರಾಳಗಳು ದಕ್ಷಿಣ, ಪಶ್ಚಿಮ ಮತ್ತು ಉತ್ತರಕ್ಕೆ ಮುಖಮಾಡಿಕೊಂಡಿವೆ. ಮತ್ತೊಂದು ಗರ್ಭಗೃಹವು ವಿಶಿಷ್ಟವಾಗಿದ್ದು, ಉತ್ತರಾಭಿಮುಖವಾಗಿದೆ.

**ಈಶ್ವರ ದೇವಾಲಯ, ಗಬ್ಬೂರು**

ಗಬ್ಬೂರಿನ ದೇವಾಲಯಗಳಲ್ಲಿಯೇ ಇದು ಚಿಕ್ಕದೇವಾಲಯವಾಗಿದ್ದು, ಪ್ರಮುಖ ಐತಿಹಾಸಿಕ ತಾಣವಾಗಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳನ್ನು

ಒಳಗೊಂಡಿದೆ. ಈ ದೇವಾಲಯದ ಅಧಿಷ್ಠಾನವು ಹೂತುಹೋಗಿದೆ. ಸಭಾಮಂಟಪದ ಉತ್ತರದೆಸೆಯ ಗೋಡೆಯು ಕೂಡ ಮಣ್ಣಲ್ಲಿ ಹೂತುಹೋಗಿದೆ. ದಕ್ಷಿಣ ದಿಸೆಯಲ್ಲಿ ಚರಮೂರ್ತಿಗಳನ್ನಿಡಬಹುದಾದ ಪೀಠದ ಶಿಲಾಫಲಕವಿದೆ ಮಧ್ಯಭಾಗದಲ್ಲಿ ಕಂಭಗಳಿವೆ. ಇವುಗಳು ಅಲಂಕೃತ ಕಂಭಗಳಾಗಿದ್ದು ಸಾಮಾನ್ಯವಾಗಿ ಒಂದೇ ಮಾದರಿಯಲ್ಲಿವೆ ಎಲ್ಲಾ ಕಂಭಗಳಂತೆ ಕೆಳಭಾಗದಲ್ಲಿ ಚತುರಸ ಘನಾಕೃತಿಯಿಂದ ಕೂಡಿದ್ದು, ಮೇಲ್ಭಾಗದಲ್ಲಿ ಕುಂಭಾಕೃತಿಯ ಇಳಿಜಾರಿನಲ್ಲಿ ಬಳೆಗಳು ಅಷ್ಟ ಭುಜಾಕೃತಿ ಪಟ್ಟಿಕೆಗಳಿವೆ.

**ಮಹಾಬಳೇಶ್ವರ ದೇವಾಲಯ, ಗಬ್ಬೂರು**

ಗಬ್ಬೂರು ಗ್ರಾಮದಲ್ಲಿರುವ ಮತ್ತೊಂದು ಪ್ರಮುಖ ಐತಿಹಾಸಿಕ ತಾಣವೆಂದರೆ ಮಹಾಬಳೇಶ್ವರ ದೇವಾಲಯ. ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಮೂರು ಅಂಕಣಗಳ ಹೊರ ಮಂಟಪಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಹೂತು ಹೋಗಿದೆ ಹೊರಗಿನ ಗೋಡೆಯ ಕೆಲ ಭಾಗ ಮರು ನಿರ್ಮಾಣಗೊಂಡಿದೆ. ಕೆಳಭಾಗ ಶಿಥಿಲಗೊಂಡಿದೆ. ಹೊರಗಿರುವ ಮಂಟಪಗಳು ತೆರೆದುಕೊಂಡೆ ಇವೆ. ಅವುಗಳ ಮೇಲೆ ಮಳೆ ಮುಚ್ಚಿಗೆಯ ಜಾರು ಕಮಾನುಗಳಿವೆ. ಒಳಾಂಗಣ ಚಿಕ್ಕದಾಗಿದ್ದು, ಒಳಮಂಟಪವು ಉದ್ದವಾಗಿದೆ.

**ಮೇಳ ಶಂಕರ ದೇವಾಲಯ, ಗಬ್ಬೂರು**

ಮೇಳಶಂಕರ ದೇವಾಲಯವು ಗಬ್ಬೂರು ಗ್ರಾಮದಲ್ಲಿರುವ ಮತ್ತೊಂದು ಐತಿಹಾಸಿಕ ತಾಣವಾಗಿದೆ. ದೇವಾಲಯದ ಒಳಗೆ ಇರುವ ಶಾಸನದ ಪ್ರಕಾರ ಇದು ಕ್ರಿ.ಶ.1085ರ ಕಾಲಘಟ್ಟದ್ದಾಗಿದ್ದು ಅದು ಮೇಳಯ ಸಾಸಿರ್ವರು ಅಥವಾ ಮೇಳೆಯನು ಬಳಸುವವರು ಅಂದರೆ ಯಾವ ಅರಸರ ದತ್ತಿ ನಿಧಿ ಇಲ್ಲದೇ ಕೃಷಿಕರೆ ಮುಂದಾಗಿ ನಿಂತು ನಿರ್ಮಿಸಿದ ದೇವಾಲಯವಾಗಿದೆ.[7] ಮತ್ತೊಂದು ಕ್ರಿ.ಶ.1088ರ ಶಾಸನದನ್ವಯದ ದಾಖಲಾತಿಗಳಿಗೆ ಅನುಗುಣವಾಗಿ ಅದೇ ಶಂಕರದೇವರಿಗೆ ಕೊಟ್ಟಿರುವ ದತ್ತಿಯ ವಿವರವನ್ನು ತಿಳಿಸುವುದು.[8] ಕ್ರಿ.ಶ.1153ರ ಕಾಲದ ಮತ್ತೊಂದು ಶಾಸನವು ಇದೇ ದೇವಾಲಯದ ಗೋಡೆಯಲ್ಲಿರಿಸಲಾಗಿದ್ದು ಅದರ ಅನ್ವಯ ತ್ರಿಪುರಾಂತಕನಾಗಿರುವ ಈ ಶಂಕರ ದೇವರಿಗೆ ಕೊಟ್ಟಿರುವ ಮತ್ತು ಪಕ್ಕದಲ್ಲಿರುವ ಕೇಶವ ದೇವರಿಗೆ ನೀಡಿರುವ ದತ್ತಿಯ ವಿವರವನ್ನು ಒದಗಿಸಲಾಗುವುದು.[9] ಕ್ರಿ.ಶ.1155ರ ಶಾಸನದ ಶಿಲೆಯ ವಿವರವು ದೇವರಿಗೆ ದಾನ ಬಿಟ್ಟದ್ದನ್ನು ಹಾಗೂ ಈ ದೇವಾಲಯದ ಉತ್ತರ ದಿಸೆಯಲ್ಲಿರುವ ಕೇಶವದೇವರಿಗೆ ನೀಡಿರುವ ದತ್ತಿಯ ವಿವರವಿದೆ.[10]

ಮೇಳ ಶಂಕರ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮತ್ತು ಮುಖಮಂಟಪಗಳನ್ನು ಹೊಂದಿದೆ. ಈ ದೇವಾಲಯದ ವಿಶೇಷವೆಂದರೆ ಅಂದಿನ 11–13ನೇ ಶತಮಾನದ ದೇವಾಲಯಗಳನ್ನು ಗಮನಿಸಿದರೆ ಈ ದೇವಾಲಯವು ವಿಶಾಲವಾದುದಾಗಿದೆ. ಗರ್ಭಗೃಹದ ಅಧಿಷ್ಠಾನವು ಜಗತಿ ಪದ್ಮ ಎರಡೂ ಕಡೆ ಉಬ್ಬಿಕೊಂಡಿರುವ ಕುಮುದ ಮತ್ತು ಇಳಿಜಾರು ಮುಚ್ಚಿಗೆಯನ್ನು ಒಳಗೊಂಡಿದೆ. ಭಿತ್ತಿಯ ಸಮತಟ್ಟದ ಸರಳ ರಚನೆಯನ್ನು ಹೊಂದಿದೆ. ಸಭಾಮಂಟಪವು ಮೂರು ಕಡೆಗಳಲ್ಲಿ ತೆರೆದುಕೊಂಡಿದೆ ಪಶ್ಚಿಮ ದಿಸೆಯಲ್ಲಿ ಪೀಠದ ಶಿಲೆಗಳನ್ನು ಒಂದರ ಮೇಲೆ ಮತ್ತೊಂದನ್ನು ಪೇರಿಸಲಾಗಿದೆ. ಸಭಾಮಂಟಪವು ಭಾರದ ಮೇಲು ಛಾವಣಿಯನ್ನು ಹೊಂದಿದೆ. ಮತ್ತು ಇಳಿಜಾರಿನ ಮಳೆ ನೀರಿನ ಮುಚ್ಚಿಗೆಗಳನ್ನು ಒಳಗೊಂಡಿದೆ.

**ವೆಂಕಟೇಶ್ವರ ದೇವಾಲಯ, ಗಬ್ಬೂರು**

ಗಬ್ಬೂರು ಗ್ರಾಮದಲ್ಲಿರುವ ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದು, ಪ್ರಮುಖ ಐತಿಹಾಸಿಕ ತಾಣವಾಗಿದೆ. ದೇವಾಲಯದ ಹೊರಗೆ ಇರುವ ಕ್ರಿ.ಶ.1213ರಲ್ಲಿಯ ಶಿಲಾಶಾಸನದ ಉಲ್ಲೇಖದಂತೆ ದಾನ–ದತ್ತಿಯಿಂದ ನಿರ್ಮಿಸಿದ

ದೇವಾಲಯವಾಗಿದೆ. ಗಬ್ಬೂರು ಅಗ್ರಹಾರದ ಬ್ರಾಹ್ಮಣರೆಲ್ಲರೂ, ಜಾತವೇದ ಭಟ್ಟರ ಮುಖಾಂತರ ದೇವಾಲಯಕ್ಕೆ ಭೂಮಿಯನ್ನು ದೇಣಿಗೆಯಾಗಿ ನೀಡಿರುವ ವಿವರ ಈ ಶಿಲಾಶಾಸನದಲ್ಲಿದೆ.[11]

ಈ ದೇವಾಲಯವು ಒಂದು ಸಂಕೀರ್ಣವಾಗಿದ್ದು ಈ ದೇವಾಲಯದಲ್ಲಿ ಅನ್ಯದೇವತೆಗಳು ಇರುವುದು ಕಂಡುಬರುತ್ತಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಮತ್ತು ಪ್ರದಕ್ಷಿಣಾ ಪಥಗಳಿವೆ. ಈ ದೇವಾಲಯದ ಪೂರ್ವಕ್ಕೆ ಮತ್ತೊಂದು ಗರ್ಭಗೃಹವಿದ್ದು, ಪೂರ್ವದಲ್ಲಿ ಪ್ರದಕ್ಷಿಣಾ ಪಥ, ಅಂತರಾಳ ಒಳಗೊಂಡ ದೇವಾಲಯವಿದೆ. ಉತ್ತರಕ್ಕೆ ಸಭಾಮಂಟಪದ ಮುಖಮಂಟಪಗಳಿವೆ. ಸಭಾಮಂಟಪದ ಮತ್ತು ಮುಖಮಂಟಪದ ಅಧಿಷ್ಠಾನಗಳಿಗೆ ಜಗತಿ, ಪದ್ಮ ಮತ್ತು ಕಂಠಗಳಿದ್ದು, ಅವು ಚೌಕ ಪಟ್ಟಿಕೆಯ ಹೂವುಗಳಿಂದ ಅಲಂಕೃತಗೊಂಡಿವೆ. ಮುಖಮಂಟಪದ ಮತ್ತು ಸಭಾಮಂಟಪದ ಉತ್ತರಗೋಡೆಗಳು ಮೇಲ್ಮುಖವಾಗಿ ಕೆಳಭಾಗದಲ್ಲಿ ಕಿರುಗಾತ್ರದ ಗೋಪುರಾಕೃತಿಗಳಿಂದ ಅಲಂಕರಿಸಲಾಗಿದೆ. ಮೇಲ್ಭಾಗದಲ್ಲಿ ರಂಧ್ರಗಳಿಂದ ಕೂಡಿದ ಜಾಲಂದ್ರಗಳಿವೆ. ಈ ಗೋಡೆಯಲ್ಲಿ ಹಲವು ವಿಧದ ಗೋಡೆಯ ಕಂಭಗಳಿವೆ ಅವು ಮೇಲೆ ಕಿರುಗಾತ್ರದ ಗೋಪುರಾಕೃತಿಗಳಿವೆ. ಉತ್ತರ ದಿಕ್ಕಿನ ದ್ವಾರದ ಪಕ್ಕದಲ್ಲಿರುವ ಗೋಡೆಗಂಭದ ಅಡಿಯಲ್ಲಿ ಸ್ತ್ರೀ ದ್ವಾರಪಾಲಕಿಯರಿದ್ದಾರೆ. ಅವರಿಗೆ ಮಕರ ತೋರಣದಲ್ಲಿ ಪುರುಷರು ಸಹಾಯಕರಿದ್ದಾರೆ. ಅವರ ಕೆಲ ಆಕಾರಗಳು ಭಗ್ನಗೊಂಡಿವೆ. ಸಭಾಮಂಟಪದ ಪೂರ್ವ ಮತ್ತು ಪಶ್ಚಿಮದ ಗೋಡೆಗಳಲ್ಲಿ ಎರಡು ಫಲಕಗಳಿದ್ದು ಅವು ಒಂದರ ಮೇಲೊಂದು ಇವೆ. ಈ ಫಲಕಗಳಲ್ಲಿ ದಾಪುಗಾಲು ಹಾಕುತ್ತಾ ಬರುತ್ತಿರುವ ಆನೆಗಳ ಅಲಂಕೃತ ಶಿಲ್ಪಗಳಿವೆ. ಮೇಲಭಾಗದಲ್ಲಿ ಜಾಲಂಧ್ರಗಳಿವೆ.

**ನೀಲಕಂಠೇಶ್ವರ ದೇವಾಲಯ, ಗಬ್ಬೂರು**

ಗಬ್ಬೂರುನಲ್ಲಿರವ ನೀಲಕಂಠೇಶ್ವರ ದೇವಾಲಯವು ಪ್ರಮುಖ ಐತಿಹಾಸಿಕ ಪ್ರವಾಸಿ ತಾಣವಾಗಿದೆ. ಗಬ್ಬೂರು ಊರ ಮಧ್ಯದಲ್ಲಿಯ ನೀಲಕಂಠೇಶ್ವರ ದೇವಾಲಯವು ಊರ ಅಗಸೆಯ ಪಕ್ಕದಲ್ಲಿಯೇ ಇದೆ. ಈ ದೇವಾಲಯ ಮತ್ತು ಅಗಸೆಯ ಹತ್ತಿರ ಶಿಲಾಶಾಸನದ ಫಲಕವಿದೆ. ಅದು ಜಗದೇಕಮಲ್ಲನ ಕಾಲದ್ದಾಗಿದೆ. ಈ ಶಾಸನವು ಕ್ರಿ.ಶ.1144ರ ಕಾಲಕ್ಕೆ ಸೇರಿದ್ದು, ಗಬ್ಬೂರಿನ ಉತ್ತರಕ್ಕೆ ಇರುವ ಕನಕಗಿರಿಯ ನಾಗಭೂಷಣದೇವರ ಪೂಜೆ ಜೀರ್ಣೋದ್ಧಾರಗಳಂತಹ ಕಾರ್ಯಕ್ಕಾಗಿ ಗಬ್ಬೂರಿನ ಮಾಲೆಗಾರ ಅವರತ್ತೊಕ್ಕಲು ಮತ್ತು ಬಿಲ್ಲ ಮುನ್ನುರುರವರು ಬಾಡುಕಾ ಮಾರಿದ ಹೆಡೆಗೆಗೆ ಅರಮಾನ ಭತ್ತ ನೀಡಬೇಕೆಂದಿದೆ. ಇದನ್ನು ಹೊರಗೆ ಮಾರಿದಲ್ಲಿ ಬಿಲ್ಲಿಕಾ ಹೆಡೆಗೆಗೆ ಒಮ್ಮಾನ, ಉಪ್ಪಿನ ಹೆಡೆಗೆಗೆ ಅರಮಾನ ಭತ್ತ ಕೊಡಬೇಕೆಂದು ತೀರ್ಮಾನಿಸಲಾಗಿದೆ. ಮಹಾ ಜನಗಳು ನಾಗಭೂಷಣ ದೇವರ ಸತ್ರಕ್ಕೆ ಜೋಳವನ್ನು ಬಿಡುತ್ತಾರೆ.[12]

**ಹನುಮಂತ ದೇವಸ್ಥಾನ, ಗಬ್ಬೂರು**

ಹನುಮಂತ ದೇವಾಲಯವು ಗಬ್ಬೂರಿನಲ್ಲಿರುವ ಮತ್ತೊಂದು ಪ್ರಮುಖ ಐತಿಹಾಸಿಕ ತಾಣವಾಗಿದೆ. ನೀಲಕಠೇಶ್ವರ ದೇವಾಲಯದ ಎದುರಿಗೆ ಇರುವ ಈ ಹನುಮಂತ ದೇವರ ದೇವಾಲಯವು ಇಂದಿಗೂ ಸುಸ್ಥಿತಿಯಲ್ಲೇ ಇದ್ದು, ಈ ದೇವಾಲಯದ ಹತ್ತಿರದ ಒಂದು ಶಿಲಾಶಾಸನವಿದ್ದು, ನೀಲಕಂಠೇಶ್ವರ ದೇವಾಲಯದ ಶಾಸನದಂತೆ ಈ ಶಾಸನವು ಈ ದೇವಾಲಯಕ್ಕೆ ಒಳಪಟ್ಟಿರುವುದಿಲ್ಲ. ಶಾಸನವೇ ಮಾತನಾಡುವಂತೆ ಇದು ಮೂರು ಭಾಗಗಳಲ್ಲಿದೆ. ಬಹುಭಾಗ ತೃಟಿತಗೊಂಡಿದೆ. ಇದು ಆದಿಲ್‌ಶಾಹಿಗಳ ಅಂತಿಮ ಕಾಲದ್ದಿರಬೇಕು. ಇಲ್ಲಿಯ ಕನ್ನಡದ ಬಹುಭಾಗವು ಉರ್ದುಮಯವಾಗಿದೆ. ಗೊಬ್ಬೂರಿನ ರೈತರ ಬೆಳೆಯ ಪಾಲನ್ನು ಮಾಪುಮಾಡುವಂತೆ ಇದ್ದು, ಇದು ಕ್ರಿ.ಶ. 17ನೇ ಶತಮಾನದ ಲಿಪಿಯಂತಿದೆ ಎಂದು ಶಾಸನತಜ್ಞರಾಗಿರುವ ಡಾ. ದೇವರಕೊಂಡಾರೆಡ್ಡಿಯವರು ಅಭಿಪ್ರಾಯಪಡುತ್ತಾರೆ.[13]

ಮತ್ತೊಂದು ಶಾಸನವು ಇದೇ ದೇವಾಲಯದ ಆವರಣದಲ್ಲಿದೆ.[14]

ಈ ದೇವಾಲಯದ ಉತ್ತರದ ಗೋಡೆಯಲ್ಲಿ ಯೋಗಿಯೋರ್ವರ ಉಬ್ಬು ಶಿಲ್ಪವಿದೆ. ಆ ಶಿಲ್ಪದ ಸುತ್ತ 12–13ನೇ ಶತಮಾನದ ಲಿಪಿಯಲ್ಲಿ ಸಂಕರದಾಸಲಿಂಗ ಸನ್ಯಾಸಿ ಕೇಶವ ಪಂಡಿತ ಎಂದು ಬರೆಯಲಾಗಿದೆ. ಆ ಶಿಲಾ ಶಾಸನದ ಅಡಿಯಲ್ಲೆ ಒಂದು ರಿಕ್ತಕೋಷ್ಟವಿದೆ. ಅದರ ಪಕ್ಕದಲ್ಲಿ ವೀರಗಲ್ಲು ಇದ್ದು, ವೀರನೋರ್ವನು ಕುದುರೆಯ ಮೇಲೆ ಸೆಣಸುತ್ತಿರುವ ಉಬ್ಬು ಶಿಲ್ಪವಿದೆ. ಅದರೊಂದಿಗೆ ಇತರ ಸೈನಿಕರು ಇದ್ದು, ಮೇಲು ಭಾಗದಲ್ಲಿ ಸ್ವರ್ಗಕ್ಕೆ ಸಾಗಿರುವ ವಿಮಾನಿನ ಉಬ್ಬು ಶಿಲ್ಪವಿದೆ. ಎದುರು ಗೋಡೆಯಲ್ಲಿ ಸಾಧಕರಿಬ್ಬರು ಸ್ಥಾವರ ಲಿಂಗವನ್ನು ಆರಾಧಿಸುತ್ತಿದ್ದಾರೆ. ಕೆಳಭಾಗದಲ್ಲಿ ನಂದಿ ಇದೆ. ಇದೊಂದು ಉಬ್ಬು ಶಿಲ್ಪವಾಗಿದೆ. ಇದರ ಕೆಳಗಿನ ಮಾಡು ಇದ್ದು ಅದರಲ್ಲಿ ವಿನಾಯಕನ ಮೂರ್ತಿ ಇದೆ. ಮುಂದೆ ಮತ್ತೊಂದು ಮಾಡು ಇದ್ದು ಅದರಲ್ಲಿ ಏನೂ ಇರದೇ ರಿಕ್ತವಾಗಿದೆ.

**ವೀರಭದ್ರೇಶ್ವರ ದೇವಾಲಯ, ಗಬ್ಬೂರು**

ಗಬ್ಬೂರಿನ ಮತ್ತೊಂದು ಪ್ರಮುಖ ದೇವಾಲಯವಾದ ವೀರಭದ್ರೇಶ್ವರ ದೇವಾಲಯವು ಕಲ್ಯಾಣಿ ಚಾಲುಕ್ಯರ ಶೈಲಿಯನ್ನು ಹೊಂದಿದ್ದು, 12ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ದೇವಾಲಯವು ಊರಿನ ಅಗಸೆಯ ಹತ್ತಿರವೇ ಇದೆ. ಇದೊಂದು ಸರಳ ಮಾದರಿಯ ದೇವಾಲಯವಾಗಿದ್ದು, ಹೊರಗಿನ ಗೋಡೆಯನ್ನು ಕಟ್ಟಿಸಿದ ಕಾರಣ ದೇವಾಲಯವು ಸಾಮಾನ್ಯ ಮನೆಯಂತೇ ಕಾಣುವುದು ಪಶ್ಚಿಮ ದಿಕ್ಕಿನ ಬಾಗಿಲವು ಅಲಂಕೃತವಾಗಿದ್ದು, ದ್ವಾರದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ.

ಈ ದೇವಾಲಯದ ಹತ್ತಿರವೇ ಶಾಸನವಿದ್ದು, ಅದು ದೇವಾಲಯಕ್ಕೆ ಸಂಬಂಧಿತವಾದುದೆ ಆಗಿದೆ. ಈ ಶಾಸನವು ಕ್ರಿ.ಶ.1141ರ ಕಾಲಕ್ಕೆ ಸೇರಿದ್ದು, ಕಲ್ಯಾಣಿ ಚಾಲುಕ್ಯರ ಅರಸ ಜಗದೇಕಮಲ್ಲನ ಕಾಲದ್ದಾಗಿದೆ. ಶಾಸನದ ಆರಂಭ ಭಾಗವು ಸಂಸ್ಕೃತ ಭಾಷೆಯಲ್ಲಿದ್ದು, ಕೇಶವನನ್ನು ಸ್ತುತಿಸಲಾಗಿದೆ. ನಂತರ ಆದಿವರಾಹ ಮೂರ್ತಿಯನ್ನು ಸ್ತುತಿಸಿ ಮಂಚಣಾರ್ಯನಿಗೆ ಒಳ್ಳೆಯದಾಗಲೆಂದು ಹರಿಸಿದೆ. ಈ ಕಾಲಕ್ಕೆ ತೀರಹೋಗಿದ್ದ ಗೊಬ್ಬೂರಿನ ಪರಮಭಾಗವತನಾದ ವೈಷ್ಣವ ಮಂಚೈಪ್ಪಣನಂ ಎರಡನೆಯ ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ನಿಟ್ಟಾರಿಯ ವೈಷ್ಣವ ಕಂದರ್ಪ ಭಟ್ಟನಿಂದ ಪ್ರಥಮ ಮತ್ತು ದ್ವಿತೀಯ ನಿವೇಶನಗಳನ್ನು ಹೊಲದ ಬೆಳೆಯನ್ನು ಕ್ರಯಕ್ಕೆ ಪಡೆದು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನ ಕೇಶವ ದೇವರ ಪೂಜೆಗೆ ನೀಡಿರುವ ವಿವರಣೆ ಇದೆ. ಶಾಸನವು 34 ಸಾಲುಗಳನ್ನು ಒಳಗೊಂಡಿದೆ.[15]

**ಚಿಂಚೊಳ್ಳಿ ಬಸವಣ್ಣ, ಗಬ್ಬೂರು**

ಗಬ್ಬೂರಿನಲ್ಲಿರುವ ಚಿಂಚೋಳ್ಳಿ ಬಸವಣ್ಣ ದೇವಾಲಯವು ಪ್ರಮುಖ ಐತಿಹಾಸಿಕ ತಾಣವಾಗಿದೆ. ಗಬ್ಬೂರಿನ ಈ ದೇವಾಲಯದ ಮುಂದೆ ಇರುವ ಶಾಸನದಂತೆ ಈ ದೇವಾಲಯವನ್ನು ಕ್ರಿ.ಶ.1141ರ ಕಾಲಘಟ್ಟದಲ್ಲಿ ನಿರ್ಮಿಸಲಾಯಿತು. ಇದು ಕಲ್ಯಾಣಿ ಚಾಲುಕ್ಯರ ಕಾಲದ್ದಾಗಿದ್ದು, ಕ್ರಿ.ಶ.12ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ದಾಖಲೆಗಳ ಆಧಾರದ ಪ್ರಕಾರ ವೈಷ್ಣವ ಮಂಚಪ್ಪಯ್ಯನು ಕೇಶವದೇವರ ಆರಾಧನೆಗಾಗಿ ತನ್ನ ಭೂಮಿಯನ್ನು ನೀಡಿರುವುದು ತಿಳಿಯುವುದು.[16]

ಈ ದೇವಾಲಯಕ್ಕೆ ಎರಡು ಅಂತರಾಳಗಳುಳ್ಳ ಎರಡು ಗರ್ಭಗೃಹಗಳಿವೆ. ಒಂದು ಗರ್ಭಗೃಹ ಉತ್ತರಾಭಿಮುಖವಾಗಿದ್ದರೆ, ಮತ್ತೊಂದು ದಕ್ಷಿಣಾಭಿಮುಖವಾಗಿದೆ. ದೇವಾಲಯದ ಸಭಾ ಮಂಟಪವು ಪೂರ್ವದೆಸೆಯತ್ತ ತೆರೆದುಕೊಂಡಿದೆ. ಪಶ್ಚಿಮ ದೆಸೆಯಲ್ಲಿರುವ ಸಭಾಮಂಟಪದ ಗೋಡೆಯ ಇತ್ತೀಚಿನದಾಗಿದೆ. ಈ ದೇವಾಲಯದ ಅಧಿಷ್ಠಾನ ಹೊಳಲ್ಪಟ್ಟಿದೆ. ಪಶ್ಚಿಮದ ದಿಕ್ಕಿನಲ್ಲಿರುವ ದೇವಾಲಯವು ವಸತಿ ಮನೆಯಾಗಿ ಆಕ್ರಮಿಸಲ್ಪಟ್ಟಿದೆ. ಗೋಡೆಯ ರಚನೆಯು ಸರಳವಾಗಿದೆ. ದೇವಾಲಯದ ಸುತ್ತಲಿನ ಮೇಲ್ಭಾಗದಲ್ಲಿ ಸೂಕ್ಷ್ಮ

ಕೆತ್ತನೆಗೆ ಒಳಪಡದೆ ಸಾಧಾರಣಾ ರಚನೆಯಲ್ಲಿ ನಿರ್ಮಾಣಗೊಂಡಿದೆ. ಪೂರ್ವ ದಿಕ್ಕಿನತ್ತ ಇರುವ ಸಭಾಮಂಟಪದ ಚಾಚು ಮಳೆಯ ಮಚ್ಚಿಗೆಯು ಭಾರದ ಬಲದಿಂದ ಬಾಗಿಕೊಂಡಂತಿದೆ. ಸಭಾಮಂಟಪದ ಮುಂಭಾಗದಲ್ಲಿ ಕಕ್ಷಾಸನವಿದೆ. ಈ ದೇವಾಲಯದ ಮೇಲ್ಭಾಗದಲ್ಲಿ ಯಾವುದೇ ಗೋಪುರವೂ ಉಳಿದುಕೊಂಡಿಲ್ಲ. ಮೂಲ ಕೇಶವನ ದೇವಾಲಯವು ಈಗ ಬೇರೆ ಹೆಸರಿನಿಂದ ಕರೆಯಲ್ಪಡುತ್ತದೆ.

**ಕೊನೆ ಟಿಪ್ಪಣಿಗಳು**

1. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–7, ರಾಯಚೂರು ಜಿಲ್ಲೆ, ದೇವದುರ್ಗ, ಗಬ್ಬೂರು, ಸಂ–2, ಪು–46–47
2. ಅದೇ. ಸಂ–18, ಪು–76–80.
3. ಅದೇ, ಸಂ–06, ಪು–57–58.
4. ಅದೇ, ಸಂ–18, ಪು–76–80.
5. ಅದೇ, ಸಂ–13, ಪು–71–72.
6. ಅದೇ, ಸಂ–7, ಪು–58–59.
7. ಅದೇ, ಸಂ–2, ಪು–46–47.
8. ಅದೇ, ಸಂ–3, ಪು–50–51.
9. ಅದೇ, ಸಂ–4, ಪು–52–53.
10. ಅದೇ. ಸಂ–4, ಪು–52–53.
11. ಅದೇ, ಸಂ–9, ಪು–61–62.
12. ಅದೇ, ಸಂ–13, ಪು–71–72.
13. ಅದೇ, ಸಂ–14, ಪು–72–73.
14. ಅದೇ, ಸಂ–1, ಪು–45–46.
15. ಅದೇ, ಸಂ–10, ಪು–67–68.
16. ಅದೇ, ಸಂ–10, ಪು–67–68.